ಎಂದು ಹೇಳ್ತಾ ಇದ್ರು. ನಂಗೆ ಅದು ನೆನಪಿಗೆ ಬಂತು. ಕುಟ್ಟಿಚೇರ ಅಂತೊಂದು ಏರಿಯಾ ಅದು. ಅಲ್ಲಿ ಗಂಡಸರು ಬಹಳ ಕಮ್ಮಿ. ಹೆಂಗಸರು ಮತ್ತು ಮಕ್ಕಳೇ ಜಾಸ್ತಿ. 'ನಾವೆಲ್ಲರೂ ಅರಬ್ಬಿಗಳನ್ನು ಮದುವೆಯಾಗಲಿಕ್ಕಾಗಿಯೇ ಇರುವುದು' ಅಂತ ಅಲ್ಲಿನ ಹೆಂಗಸರ ನಂಬಿಕೆ. ಏಳನೇ ಶತಮಾನಕ್ಕಿಂತ ಮುಂಚೆಯೇ ಅಲ್ಲಿಗೆ ಅರಬ್ಬಿಗಳು ವ್ಯಾಪಾರಿಗಳು ಬರ್ತಾ ಇದ್ದರು. ಹಾಗೆ ಬಂದ ವ್ಯಾಪಾರಿಗಳು ಅಲ್ಲಿ ತಾತ್ಕಾಲಿಕವಾಗಿ ಮದುವೆ ಆಗ್ತಾರೆ. ತಾತ್ಕಾಲಿಕ ನಿಖಾ ಆಗಿ ಆರು ತಿಂಗಳೋ ವರ್ಷವೋ ಇರ್ತಾರೆ. ನಂತರ ಊರಿಗೆ ಹೋಗುವಾಗ ಇವರಿಗೆ ತಲಾಖ್ ಕೊಟ್ಟು ಹೋಗ್ತಾರೆ. ಅದು ಬಿಟ್ಟರೆ ಅಲ್ಲಿನ ಹೆಂಗಸರಿಗೆ ಯಾವ ಉದ್ಯೋಗವೂ ಗೊತ್ತಿಲ್ಲ. ಮಕ್ಕಳೂ ಅಲ್ಲಿಯೇ ಬಿದ್ಕೊಂಡಿರ್ತವೆ. ಹೆಂಗಸರು ಬದುಕಬೇಕಿದ್ದರೆ ಅರಬ್ಬಿಗಳನ್ನು ಮದುವೆಯಾಗಬೇಕು. ಇಲ್ಲದಿದ್ದರೆ ಭಿಕ್ಷೆ ಬೇಡಬೇಕು, ಇಲ್ಲವೇ ವೇಶ್ಯೆಯರಾಗಬೇಕು. ಬೇರೆ ಬದುಕಿಗೆ ಆಸ್ಪದವೇ ಇಲ್ಲ. ನಾನು ಆ ಜಾಗಕ್ಕೆ ಹೋಗಿ ಬಂದು ಬೊಳುವಾರರಿಗೆ ಹೇಳಿದ್ದೆ. ಅವರು ಆಗ ಮಣಿಪಾಲದಲ್ಲಿದ್ದರು. 'ನಾನೂ ಬರ್ತೇನೆ ಒಟ್ಟಿಗೆ ಹೋಗ್ವ' ಅಂದರು. ನಾವಿಬ್ಬರೂ ಮತ್ತೆ ಹೋಗಿ ಅಲ್ಲಿನ ಎಲ್ಲರನ್ನೂ ಮಾತಾಡಿಸಿ ವಿಚಾರಗಳನ್ನು ತಿಳಿದುಕೊಂಡು ಬಂದೆವು. ಬೊಳುವಾರರು 'ಮುತ್ತುಚೇರ' ಅಂತೊಂದು ಕಥೆ ಬರೆದರು. ನಾನು 'ಸರಕುಗಳು' ಅಂತ್ಹೇಳಿ ಕಾದಂಬರಿ ಬರೆದೆ. ಅದು 'ಸುಧಾ' ಪತ್ರಿಕೆಯಲ್ಲಿ ಬಂದಿತ್ತು. ಅದಕ್ಕೆ ಬಹಳ ವಿಶೇಷ ಪ್ರತಿಕ್ರಿಯೆಗಳು ಬಂದವು. ದುಬೈಗೆ ಹೋಗುವ 'ಸುಧಾ' ಪತ್ರಿಕೆಯನ್ನು ಗೌರ್ಮೆಂಟಿನವರು 'ಸರಕುಗಳು' ಧಾರಾವಾಹಿ ಪ್ರಕಟವಾದ ಪುಟಗಳನ್ನು ಕತ್ತರಿಸಿ ಕಳಿಸ್ತಿದ್ರಂತೆ. ಅದನ್ನೆಲ್ಲ ಓದುಗರು ಪತ್ರ ಬರೆದು ತಿಳಿಸ್ತಿದ್ರು.

ಆ ಕಾದಂಬರಿಯಲ್ಲಿ ಬರುವ ಬಹುತೇಕ ವಿವರಗಳು ವಾಸ್ತವದಲ್ಲಿ ಇರುವಂಥದ್ದು. ಇದನ್ನು ಮಲಯಾಳಂಗೆ ಅನುವಾದ ಮಾಡುವ ಪ್ರಯತ್ನವನ್ನೂ ಮಾಡಿದ್ದರು. ಆದರೆ ಮಲಯಾಳಂನ ಯಾವ ಪತ್ರಿಕೆಯೂ ಪ್ರಕಟಿಸಲಿಕ್ಕೆ ಮುಂದೆ ಬರಲಿಲ್ಲ. ಯಾಕೆಂದರೆ ಆ ಎಲ್ಲ ಪತ್ರಿಕೆಗಳಲ್ಲಿಯೂ ಅರಬ್ಬಿಗಳ ಬಂಡವಾಳ ಇತ್ತಂತೆ. ನಂತರ ಅದು ಮಲಯಾಳಂನಲ್ಲಿ ಅನುವಾದ ಆಯ್ತು. ಮರಾಠಿಗೂ ಆಯ್ತು. ಆದರೆ ಆ ಕಾದಂಬರಿ ಕನ್ನಡದಲ್ಲಿ ಹೆಚ್ಚು ಚರ್ಚೆ ಆಗಲೇ ಇಲ್ಲ. ಯಾಕಂತ್ಹೇಳಿ ಗೊತ್ತಿಲ್ಲ. ಈಗ ಇಂಗ್ಲಿಷಿಗೂ ಅನುವಾದ ಆಗಿದೆ. ಯಾರಾದ್ರೂ ಪ್ರಕಾಶಕರು ಸಿಕ್ತಾರಾ ಅಂತ ಹುಡುಕ್ತಾ ಇದ್ದೇನೆ.

ನನ್ನ ಇನ್ನೊಂದು ಕಾದಂಬರಿ 'ಕಚ್ಚಾದ'. ಕಚ್ಚಾದ ನನ್ನ ಎದುರಿಗೇ ನಡೆದುಕೊಂಡು ಹೋಗುತ್ತಿದ್ದ ಜೀವ. ನಾವು ಬಾಲ್ಯದಲ್ಲಿ ಕಂಡ ಹೆಂಗಸು – ಅವಳೊಂಥರ ಗಟ್ಸ್ ಇರುವ ಹೆಂಗಸು, ಕೂಲಿ ಹೆಂಗಸು. ಒಬ್ಬ ಮಗ ಇದ್ದ. ಅವ ಬಾಂಬೈಗೆ ಹೋಗಿ ನಂತರ ಎಲ್ಲಿಗೆ ಹೋದ ಪತ್ತೆ ಇಲ್ಲ. ಅವಳು ನಮ್ಮೂರಲ್ಲಿ ಕೂಲಿ ಮಾಡ್ತಾ ಇದ್ದಳು. ಬಹಳ ಜೋರಿನಲ್ಲಿ ಒಬ್ಬ ವಕೀಲೆಯ ಥರದಲ್ಲಿ ಆರ್ಗ್ಯುಮೆಂಟ್ ಮಾಡ್ತಾ ಇದ್ಲು. ಅವಳು ಮತ್ತು ಅವತ್ತಿನ ಸಾಮಾಜಿಕ ಹಿನ್ನೆಲೆ ಇಟ್ಟುಕೊಂಡು 'ಕಚ್ಚಾದ' ಕಾದಂಬರಿ ಬರೆದಿದ್ದು ನಾನು.

- **ಸೂಫಿ ಸಾಹಿತ್ಯದ ಬಗ್ಗೆ ನೀವು ಸಾಕಷ್ಟು ಅಧ್ಯಯನ ನಡೆಸಿದ್ದೀರಿ. ಆದರೆ ಬರೆದಿದ್ದು ಮೂರೇ ಪುಸ್ತಕ. ಸೂಫಿ ಸಾಹಿತ್ಯದ ಬಗ್ಗೆ ಒಲವು ಬಂದಿದ್ದು ಹೇಗೆ?**

ಬಾಲ್ಯದಲ್ಲಿಯೇ ನನಗೆ ತಂದೆಯವರ ಜತೆಯಲ್ಲಿ ಲಕ್ಷದ್ವೀಪದಿಂದ ಹಸಿರು ಮುಂಡಾಸು ಕಟ್ಟಿದ ಕೆಲವರು ಬರ್ತಾ ಇದ್ದರು. ಅವರಲ್ಲಿ ಒಳ್ಳೆಯವರು ಅಂತ ಕಂಡುಬಂದವರನ್ನು ತಂದೆ, ಮನೆಗೂ ಕರ್ಕೊಂಡು ಬರ್ತಾ ಇದ್ದರು. ಒಳ್ಳೆಯವರು ಅಂತ ಯಾಕೆ ಹೇಳಿದೆ ಅಂದರೆ ಹಾಗೆ ಬರುವವರಲ್ಲಿ ಕೆಲವು ಮಂತ್ರವಾದಿಗಳೂ ಇರುತ್ತಿದ್ದರು. ಹಾಗೆ ತಂದೆಯವರ ಜತೆಗೆ ಬರುವವರು ಸೂಫಿಗಳು ಅಂತ ನನಗೆ ಗೊತ್ತಿರಲಿಲ್ಲ. ಕಟ್ಪಾಡಿಯಲ್ಲಿ ಒಂದು ದರ್ಗಾ ಇದೆ. ಅಲ್ಲಿಗೆ ಬಂದವರು ಕೂಡ ದ್ವೀಪಗಳಿಂದ ಬಂದವರು ಅಂತ ನಂಬಿಕೆ ಇದೆ. ಹಾಗಾಗಿ ಅಲ್ಲಿಂದ ಹೆಚ್ಚು ಮತಪಂಡಿತರು ಕಟ್ಪಾಡಿಗೆ ಬರ್ತಾ ಇದ್ರು.